ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	95
ಸದಸ್ಯರ ಹೆಸರು	:	ಶ್ರೀ ಕೆ.ಎ ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ	:	2-2-2021
ಉತ್ತರಿಸುವವರು	:	ನಗರಾಭಿವೃದ್ಧಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	2020ರ ಮುಕ್ತಾಯದ ವೇಳೆಗೆ ಹಸ್ತಚಾಲಿತ ಸ್ಕ್ಯಾವೆಂಜಿಂಗ್ (ಜಾಡುಮಾಲಿ ವೃತ್ತಿ) ಅನ್ನು ನಿರ್ಮೂಲನೆ ಮಾಡುವ ಗುರಿಯನ್ನು ಪೂರೈಸಲಾಗುತ್ತಿದೆಯೇ ಅಥವಾ ಅದನ್ನು ಮತ್ತಷ್ಟು ಮುಂದೂಡಲಾಗುತ್ತಿದೆಯೇ. (ವಿವರಗಳನ್ನು ಒದಗಿಸುವುದು).	ರಾಜ್ಯದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಪದ್ಧತಿಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ಸಲುವಾಗಿ ಸರ್ಕಾರದಿಂದ ಈ ಕೆಳಕಂಡಂತೆ ಕ್ರಮವಹಿಸಲಾಗಿರುತ್ತದೆ. • ನಗರಸ್ಥಳೀಯ ಸಂಸ್ಥೆಗಳಲ್ಲಿ ಒಳಚರಂಡಿ ಅಥವಾ ಸೆಪ್ಟಿಕ್ ಟ್ಯಾಂಕ್‌ಗಳ ಅಪಾಯಕಾರಿ ಸ್ವಚ್ಛತೆಯನ್ನು ಯಾಂತ್ರೀಕೃತಗೊಳಿಸಲಾಗಿರುತ್ತದೆ. 280 ನಗರಸ್ಥಳೀಯ ಸಂಸ್ಥೆಗಳಲ್ಲಿ 416 Suction/ Jetting, desilting, rodding ಯಂತ್ರಗಳನ್ನು ಬಳಸಿ ಒಳಚರಂಡಿ ಅಥವಾ ಸೆಪ್ಟಿಕ್ ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸಲಾಗುತ್ತಿದೆ. • ಆದಾಗ್ಯೂ ನಗರ/ಪಟ್ಟಣದಲ್ಲಿ ಕೆಲವೊಂದು ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಮರಣ ಪ್ರಕರಣಗಳು ವರದಿಯಾಗುತ್ತಿದ್ದು, ಇದನ್ನು ತಡೆಗಟ್ಟುವ ಸಲುವಾಗಿ ಎಲ್ಲಾ ನಗರಸ್ಥಳೀಯ ಸಂಸ್ಥೆಗಳಲ್ಲಿ ಸಕ್ಷನ್/ ಜೆಟ್ಟಿಂಗ್ ಯಂತ್ರಗಳ ಆಪರೇಟರ್, ಮೇಲ್ವಿಚಾರಕರು, ಸಂಬಂಧಪಟ್ಟ ಕಿರಿಯ/ ಸಹಾಯಕ ಅಭಿಯಂತರನ್ನು ಒಳಗೊಂಡ ತಂಡ Manhole Cleaning Task Force (MCTF)/ Emergency Response Sanitation Unit (ERSU) ರಚನೆಯಾಗಿರುತ್ತದೆ. ಸದರಿ ತಂಡಕ್ಕೆ ಸೂಕ್ತ ತರಬೇತಿ ನೀಡಿ, ತರಬೇತಿ ಪಡೆದ ಕೆಲಸಗಾರರ ಮೂಲಕವೆ Suction/ Jetting ಬಳಸಿ ಎಲ್ಲಾ ಸುರಕ್ಷತಾ ಕ್ರಮಗಳನ್ನು ಅನುಸರಿಸಿ ಸ್ವಚ್ಛಗೊಳಿಸಲು ಕ್ರಮವಹಿಸಲಾಗುತ್ತಿದೆ. • ಸದರಿ ವೃತ್ತಿಯಲ್ಲಿ ತೊಡಗಿರುವವರನ್ನು ಗುರಿತಿಸಲಾಗುತ್ತಿದೆ ಹಾಗು ಸದರಿಯವರು ಮರಳಿ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ವೃತ್ತಿಯಲ್ಲಿ ತೊಡಗದಂತೆ ಪುನರ್ವಸತಿ ಕಲ್ಪಿಸಲು ಕ್ರಮವಹಿಸಲಾಗುತ್ತಿದೆ. • ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಪದ್ಧತಿ ನಿರ್ಮೂಲನೆ ಹಾಗು ಯಂತ್ರಾಧಾರಿತ ಸೆಪ್ಟಿಕ್ ಟ್ಯಾಂಕ್/ ಯು.ಜಿ.ಡಿ ನೆಟ್‌ವರ್ಕ್‌ಗಳನ್ನು ಸ್ವಚ್ಛಗೊಳಿಸುವ ಬಗ್ಗೆ ಜನಸಾಮಾನ್ಯರಿಗೆ ಅರಿವು ಮೂಡಿಸಲು ಕರಪತ್ರ, ದಿನ ಪತ್ರಿಕೆಗಳಲ್ಲಿ ಪ್ರಕಟಣೆ, ಆಟೋ ಪ್ರಚಾರ, ಕೇಬಲ್ ಟಿ.ವಿ.ಗಳ ಮೂಲಕ ವ್ಯಾಪಕ ಪ್ರಚಾರ ಮಾಡಲು ಎಲ್ಲಾ ನಗರಸ್ಥಳೀಯ ಸಂಸ್ಥೆಗಳಿಗೆ ಸೂಚನೆಯನ್ನು ನೀಡಲಾಗಿರುತ್ತದೆ.

		• ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಕಾಯ್ದೆಯ ನಿಬಂಧನೆಗಳು, ಒಳಚರಂಡಿ/ ಸೆಪ್ಟಿಕ್ ಟ್ಯಾಂಕ್ ಗಳನ್ನು ಸ್ವಚ್ಛಗೊಳಿಸಲು ಆಧುನಿಕ ಯಂತ್ರದ ಬಳಕೆ, ಸುರಕ್ಷತಾ ಕಿಟ್ ಬಳಸುವ ಬಗೆ ಕುರಿತಾಗಿ ಜಿಲ್ಲಾ ಮಟ್ಟದಲ್ಲಿ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿರುತ್ತದೆ.
ಆ)	ರಾಜ್ಯಾದ್ಯಂತ ಗುರುತಿಸಲಾದ ಹಸ್ತ ಚಾಲಿತ ಸ್ಕ್ಯಾವೆಂಜರ್‌ಗಳ ಸಂಖ್ಯೆ ಎಷ್ಟು ಸಮೀಕ್ಷೆಯ ಮೂಲಕ ಜಿಲ್ಲಾವಾರು ಮತ್ತು ಇಲ್ಲಿಯವರೆಗೆ ಪುನರ್ವಸತಿ ಪಡೆದ ಸ್ಕ್ಯಾವೆಂಜರ್‌ಗಳ ಸಂಖ್ಯೆ ಎಷ್ಟು.	ರಾಜ್ಯದಲ್ಲಿ 2013ನೇ ಸಾಲಿನಲ್ಲಿ ನಡೆದ ಸಮೀಕ್ಷೆಯಲ್ಲಿ (ಬಿಬಿ.ಎಂ.ಪಿ ಹೊರತುಪಡಿಸಿ) ಈ ಕೆಳಕಂಡಂತೆ 100 ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್‌ನ್ನು ಗುರುತಿಸಲಾಗಿರುತ್ತದೆ. ರಾಷ್ಟ್ರೀಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದಿಂದ ರೂ 40,000/- ಸಹಾಯದನ ಒದಗಿಸಲಾಗಿದೆ.

ಕ್ರಸಂ	ಜಿಲ್ಲೆಯ ಹೆಸರು	ನಗರಸ್ಥಳೀಯ ಸಂಸ್ಥೆಯ ಹೆಸರು	ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಸಂಖ್ಯೆ	ಒಂದು ಬಾರಿ ಸಹಾಯದನ ರೂ 40,000/- ಒದಗಿಸಿರುವುದು
1	ಕೋಲಾರ	ಕೆ.ಜಿ.ಎಫ್ ನಗರಸಭೆ	87	83
		ಶ್ರೀನಿವಾಸಪುರ ಪುರಸಭೆ	4	-
2	ಬೆಂಗಳೂರು (ಗ್ರಾ)	ದೊಡ್ಡಬಳ್ಳಾಪುರ ನಗರಸಭೆ	7	7
3	ಕೊಪ್ಪಳ	ಗಂಗಾವತಿ ನಗರಸಭೆ	2	2
		ಒಟ್ಟು	**100**	**92**

ಪ್ರಸ್ತುತ ರಾಷ್ಟ್ರೀಯ ಸಫಾಯಿ ಕರ್ಮಚಾರಿ ಹಣಕಾಸು ಮತ್ತು ಅಭಿವೃದ್ಧಿ ನಿಗಮರವರ ಸಹಯೋಗದೊಂದಿಗೆ 12 ಜಿಲ್ಲೆಗಳಲ್ಲಿ ನಡೆಸುತ್ತಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ವಿಶೇಷ ಮರುಸಮೀಕ್ಷೆಯಲ್ಲಿ 604 ಸ್ಕ್ಯಾವೆಂಜರ್ಸ್‌ನ್ನು ಗುರುತಿಸಲಾಗಿರುತ್ತದೆ. ವಿವರ ಕೆಳಕಂಡಂತಿರುತ್ತದೆ.

ಕ್ರಸಂ	ಜಿಲ್ಲೆಯ ಹೆಸರು	ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಸಂಖ್ಯೆ	ಒಂದು ಬಾರಿ ಸಹಾಯದನ ರೂ 40,000/- ಒದಗಿಸಿರುವುದು
1	ಕಲಬುರಗಿ	196	176
2	ಬಾಗಲಕೋಟೆ	0	-
3	ಬಿಜಾಪುರ	0	-
4	ಹಾವೇರಿ	22	-
5	ರಾಯಚೂರು	6	-
6	ದಾವಣಗೆರೆ	380	362
7	ಬೆಂಗಳೂರು (ಗ್ರಾ)	0	-
8	ಕೋಲಾರ	ಸಮೀಕ್ಷೆ ನಡೆಸಿದ್ದು,	
9	ಮೈಸೂರು	ಜಿಲ್ಲಾ ವಿಚಕ್ಷಣಾ	
10	ಧಾರವಾಡ	ಸಮಿತಿ	

<table>
<tr><td></td><td></td><td>
<table>
<tr><td>11</td><td>ಬೆಂಗಳೂರು(ನ)</td><td rowspan="2">ಅನುಮೋದನೆ ಪಡೆಯಬೇಕಿರುತ್ತದೆ.</td><td></td></tr>
<tr><td>12</td><td>ಬೆಳಗಾವಿ</td><td></td></tr>
<tr><td></td><td>ಒಟ್ಟು</td><td>604</td><td>538</td></tr>
</table>
ರಾಜ್ಯದಲ್ಲಿ ಗುರುತಿಸಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್‌ಗಳಿಗೆ ಪುನರ್ವಸತಿ ಸೌಲಭ್ಯ ಕಲ್ಪಿಸುವ ಜವಾಬ್ದಾರಿಯನ್ನು ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ್ದಾಗಿರುತ್ತದೆ.
</td></tr>
<tr><td>ಇ)</td><td>ಹಸ್ತಚಾಲಿತ ಸ್ಕ್ಯಾವೆಂಜಿಂಗ್‌ನಿಂದಾಗಿ ರಾಜ್ಯದಲ್ಲಿ ಉಂಟಾಗಿರುವ ಸಾವುಗಳ ಸಂಖ್ಯೆ ಎಷ್ಟು? (ವಿವರಗಳನ್ನು ಒದಗಿಸುವುದು) ಹಸ್ತಚಾಲಿತ ಜಾಡುಮಾಲಿ ವೃತ್ತಿಯನ್ನು ತೊಲಗಿಸಲು ಸರ್ಕಾರ ವಿಫಲವಾಗಲು ಬಲವಾದ ಕಾರಣಗಳೇನು</td><td>ರಾಜ್ಯದ ನಗರಸ್ಥಳೀಯ ಸಂಸ್ಥೆಗಳಲ್ಲಿ (ಬಿ.ಬಿ.ಎಂ.ಪಿ ಹೊರತುಪಡಿಸಿ) 1993ನೇ ಸಾಲಿನಿಂದ ಇದೂವರೆವಿಗೂ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್‌ನಿಂದಾಗಿ 39 ಜನ ಮರಣಹೊಂದಿದ್ದು, ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ. ಸದರಿ ಎಲ್ಲಾ ಪ್ರಕರಣದಲ್ಲಿ ಅವರ ಅವಲಂಬಿತ ಕುಟುಂಬದವರಿಗೆ ರೂ 10.00 ಲಕ್ಷಗಳ ಪರಿಹಾರ ಒದಗಿಸಲಾಗಿರುತ್ತದೆ.

ಈ ಪ್ರಕರಣಗಳನ್ನು ಪರಿಶೀಲಿಸಿದಾಗ ಬಹುತೇಕವಾಗಿ ನಗರವ್ಯಾಪ್ತಿಯಲ್ಲಿನ ಹೋಟೆಲ್, ಮನೆ ಮಾಲಿಕರು ನಗರಸ್ಥಳೀಯ ಸಂಸ್ಥೆಗಳಿಗೆ ತಿಳಿಸದೆ ತಮ್ಮ ಸೆಪ್ಟಿಕ್‌ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸಲು ಖಾಸಗಿ ವ್ಯಕ್ತಿಗಳನ್ನು ನೇಮಿಸಿಕೊಂಡು ಅಸುರಕ್ಷತೆಯಿಂದ ಸ್ವಚ್ಛಗೊಳಿಸುವಾಗ ಮರಣಹೊಂದಿರುತ್ತಾರೆ. ಜನಸಾಮಾನ್ಯರಿಗೆ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ನೇಮಕಾತಿ ನಿಷೇಧ ಹಾಗು ಅವರ ಪುನರ್ವಸತಿ ಕಾಯ್ದೆ 2013ಯ ದಂಡ ನಿಬಂಧನೆಗಳ ಬಗ್ಗೆ ಹಾಗು ಸೆಪ್ಟಿಕ್‌ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸುವ ಯಂತ್ರಗಳ ಲಭ್ಯತೆ ಬಗ್ಗೆ ಅರಿವು ಇಲ್ಲದಿರುವುದು ಇಂತಹ ದುರಾದೃಷ್ಟಕರ ಸಂಗತಿಗಳಿಗೆ ಕಾರಣವಾಗಿರುವುದು ಕಂಡುಬಂದಿರುತ್ತದೆ.

ಇಂತಹ ಪ್ರಕರಣಗಳು ಮರುಕಳಿಸದಂತೆ ತಡೆಯಲು ಎಲ್ಲಾ ನಗರ/ಪಟ್ಟಣ ವ್ಯಾಪ್ತಿಯಲ್ಲಿ Emergency Response Sanitation Unit (ERSU) ರಚನೆಯಾಗಿದ್ದು, ಸೆಪ್ಟಿಕ್ ಟ್ಯಾಂಕ್/ ಒಳಚರಂಡಿ ಸ್ವಚ್ಛಗೊಳಿಸಲು ಕಡ್ಡಾಯವಾಗಿ ಈ ತಂಡದ ಮೂಲಕವೇ ಎಲ್ಲಾ ಸುರಕ್ಷತಾ ಕ್ರಮವಹಿಸಿ ಸ್ವಚ್ಛತೆಯನ್ನು ನಿರ್ವಹಿಸುವಂತೆ ಸೂಚನೆಯನ್ನು ನೀಡಲಾಗಿರುತ್ತದೆ</td></tr>
<tr><td>ಈ)</td><td>ಕೈಪಿಡಿ ಸ್ಕ್ಯಾವೆಂಜರ್‌ಗಳಾಗಿ ಉದ್ಯೋಗ ನಿಷೇಧ ಮತ್ತು ಅವರ ಪುನರ್ವಸತಿ ಕಾಯ್ದೆ 2013ರ ಅನ್ವಯ ಈ ಕಾಯಿದೆಯ ಅನುಷ್ಠಾನ ಮತ್ತು ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು ಸರ್ಕಾರ ಕೈಗೊಂಡಿರುವ ಮತ್ತು ಕೈಗೊಳ್ಳುತ್ತಿರುವ ಕ್ರಮಗಳೇನು?</td><td>ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ನೇಮಕಾತಿ ನಿಷೇಧ ಹಾಗು ಅವರ ಪುನರ್ವಸತಿ ಕಾಯ್ದೆ 2013, ಅನುಷ್ಠಾನಗೊಳಿಸುವುದನ್ನು ಪರಿಶೀಲನೆ ನಡೆಸಲು ಜಿಲ್ಲಾ ಮಟ್ಟದಲ್ಲಿ ಹಾಗು ಉಪವಿಭಾಗದ ಮಟ್ಟದಲ್ಲಿ ವಿಚಕ್ಷಣಾ ಸಮಿತಿಗಳನ್ನು ರಚನೆ ಮಾಡಲಾಗುತ್ತಿದೆ. ಸದರಿ ವಿಚಕ್ಷಣಾ ಸಮಿತಿ ಸಭೆಗಳಲ್ಲಿ ಮಾಸಿಕ ಸಭೆ ನಡೆಸಿ ಪ್ರಗತಿ ಪರಿಶೀಲನೆ ನಡೆಸಲಾಗುತ್ತಿದೆ.

ರಾಜ್ಯ ಮಟ್ಟದಲ್ಲಿ ಸದರಿ ಕಾಯ್ದೆ ಅನುಷ್ಠಾನಗೊಳಿಸಿರುವ ಪ್ರಗತಿ ಪರಿಶೀಲನೆ ನಡೆಸಲು ಮಾನ್ಯ ಸಚಿವರು, ಸಮಾಜ ಕಲ್ಯಾಣ ಇಲಾಖೆ ರವರ ಅಧ್ಯಕ್ಷತೆಯಲ್ಲಿ ಮೇಲ್ವಿಚಾರಣಾ ಸಮಿತಿಯನ್ನು ರಚಿಸಿದ್ದು, ನಿಯಮಿತವಾಗಿ ರಾಜ್ಯ ಮಟ್ಟದ ಸಮಿತಿ ಸಭೆಗಳನ್ನು ನಡೆಸಲಾಗುತ್ತಿದೆ.</td></tr>
</table>

ಸಂಖ್ಯೆ: ನಅಇ 08 ಜಿಇಎಲ್ 2021

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

ಅನುಬಂಧ -

The details of death due to manual cleaning of Sewers and Compensation

(as information obtained by the ULBs)

Sl No	Name of the ULB	Sl no	Name of the deceased person	Date of Death	Compensation Paid
1	Shimogga City Corporation	1	Annappa	23-11-2012	Rs 10 lakhs
		2	Ratnakar	23-11-2012	Rs 12 lakhs
2	Hubli Dharwad Municipal Corporation	3	Ramesh	22-07-2012	Rs 10.00 lakhs
		4	Santosh	22-07-2012	Rs 10.00lakhs
		5	Hanumanth Varadia	01-04-2015	Rs 11 lakhs
		6	Sufal Biswas	01-04-2015	Rs 11 lakhs
		7	Shankar Kumar	06-04-2017	Rs 10.00 lakhs
		8	Shivaputrappa	06-04-2007	Rs 10.00 lakhs
		9	Yakub	16-02-2013	Rs 10.00 lakhs
3	Mysore City Corporation	10	Shankar	2001	Rs 10.00 lakhs
		11	Kumar	02-03-2014	Rs 10.00 lakhs
4	Tumkur City Corporation	12	Narasimhamurthy	29-11-2015	Rs 10.00 lakhs
		13	Chikkanna	29-11-2015	Rs 10.00 lakhs
5	Doddaballapur City Municipal Council	14	Muniswamy	04-03-2016	Rs 10.00 lakhs
		15	K. Jagannath	04-03-2016	Rs 10.00 lakhs
		16	S. Madhu	04-03-2016	Rs 10.00 lakhs
		17	M. Muniraju	04-03-2016	Rs 10.00 lakhs
6	Kolar City Municipal Council	18	Manjunath	12-02-2010	Rs 10.00 lakhs
		19	Rajanna	12-02-2010	Rs 10.00 lakhs
7	KGF(Robertsonpet) City Municipal Council	20	Nagendra Babu	24-10-2011	Rs 10.00 lakhs
		21	Ravi	24-10-2011	Rs 10.00 lakhs
		22	Prasad	24-10-2011	Rs 10.00 lakhs
8	Tiptur City Municipal Council	23	K.M. Jagadish	17-12-2011	Rs 10.00 lakhs
		24	Dharma	17-12-2011	Rs 10.00 lakhs
9	Mandya City Municipal Council	25	Rangaswamy		Rs 10.00 lakhs
10	Chamarajanagar City Municipal Council	26	Chinnaswamy	Treasury cheque 817923 25-05-2017	Rs 10.00 lakhs
11	Krishnarajanagar Town Municipal Council	27	Kariya	2008	Rs 10.00 lakhs
		28	Lakshman	2008	Rs 10.00 lakhs
12	Raichur	29	Venkatesh	28-04-2013	Rs 10.00 lakhs
13	Channarayapatna	30	Maranna	1998-99	Rs 10.00 lakhs

	Town Municipal Council	31	Narasimharaju		Rs 10.00 lakhs
		32	Nagaraju		Rs 10.00 lakhs
14	Kundapura Town Municipal Council	33	Sandeep bin Das	07-04-2018	Rs 10.00 lakhs
15	Shimogga City Corporation	34	Anjanappa	06-08-2018	Rs 10.00 lakhs
		35	Venkatesh	06-08-2018	Rs 10.00 lakhs
16	Indi Town Municipal Council	36	Lalappa	02-04-2019	Rs 10 lakhs
		37	Nabilal		Rs 10 lakhs
		38	Gudusaba		Rs 10 lakhs
18	Karwar City Municipal Council	39	B. Kotayya	11-08-2019	Rs 10 lakhs